ಅಸಲು ದಾವಾ ನಂ. **212/2020**

ಪಿ ಡಬ್ಲ್ಯು: **1**

ಸಾಕ್ಷಿಯನ್ನು ದಿಃ **24-07-2025** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ನಂ. ನೇ 3 ಮತ್ತು 4 ಪರ ಶ್ರೀ ಕೆ ಎಲ್ ಕೆ ವಕೀಲರಿಂದ

1) ದಾವಾ ಆಸ್ತಿ ಸರ್ವೇ ನಂ. 67/ಪಿ5 ಇರುತ್ತದೆ. ಸದರಿ ಆಸ್ತಿಯು ವಾದಿಯವರಿಗೆ ಬಂದಿರುತ್ತದೆ ಎಂದು ತೋರಿಸಲು ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. ಯಾವ ದಾಖಲಾತಿ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಕಂಪ್ಯೂಟರ ಉತಾರ ಹಾಗೂ ಡ ಉತಾರಗಳನ್ನು ಹಾಜರು ಮಾಡಿರುತ್ತೇನೆ ಎಂದು ಉತ್ತರಿಸುತ್ತಾರೆ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿ ನಮ್ಮ ಹೆಸರಿನಲ್ಲಿ ಇರುವ ಯಾವುದೇ ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ ಎಂದು ಹೇಳುತ್ತಾರೆ.

2) ಸದರಿ ಸರ್ವೇ ನಂ. 67/ಪಿ5 ಇದು 80 ಎಕರೆ 34 ಗುಂಟೆ ಕಂದಾಯ ದಾಖಲಾತಿ ಪ್ರಕಾರ ಇರುತ್ತದೆ ಎಂದರೆ ಸಾಕ್ಷಿಯು 83 ಎಕರೆ 34 ಗುಂಟೆ ಅದರ ಕೇತ್ರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯು ಒಟ್ಟುಗೂಡಿಸಿ ಇರುವುದರಿಂದ ಅದರ ಹಿಡುವಳಿದಾರರ ಪ್ರತ್ಯೇಕವಾಗಿ ಯಾವ ಹಿಸ್ತೆಯಲ್ಲಿ ಇರುತ್ತದೆ ಎಂದು ನಕಾಶೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಕಾಶೆ ಇರುತ್ತದೆ ಎಂದು ಹೇಳುತ್ತಾರೆ. ಸದರಿ ನಕಾಶೆಯ ಯಾವಾಗ ಮಾಡಿರುತ್ತಾರೆ ಎಂದರೆ 2017-18 ರಲ್ಲಿ ಮಾಡಿರುತ್ತಾರೆ. ಸದರಿ ನಕಾಶೆಗಳು ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಹಾಗೂ ನಾನು ಹಾಜರು ಮಾಡುತ್ತೇನೆ.

3) ಸದರಿ ಜಮೀನು ಒಟ್ಟುಗೂಡಿಸಿ ಇರುವುದರಿಂದ ನಮಗೆ ಬಂದಿದ್ದ ಜಮೀನು ಪ್ರತ್ಯೇಕವಾಗಿ ಗುರುತಿಕೊಡಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿ ಪ್ರಕಾರ ಪ್ರಾಧಿಕಾರದವರು ನಮಗೆ ಬಂದಂತ ಜಮೀನನ್ನು ಪ್ರತ್ಯೇಕವಾಗಿ ಗುರುತು ಮಾಡಿ ಕೊಟ್ಟಿರುತ್ತಾರೆ. ಸದರಿ ಕುರಿತು ಯಾವುದಾದರೂ ದಾಖಲೆಯನ್ನು ಹಾಜರು ಮಾಡಿದ್ದೀರಾ ಎಂದು ಸಾಕ್ಷಿಯು ಸರ್ವೇ ಮಾಡಿದವರು ನಮಗೆ ಬಂದಿರುವುದಿಲ್ಲ ಎಂದು ಹೆಸೇಳಿರುತ್ತಾರೆ. ಸದರಿ ವಿರುದ್ಧ ಮೇಲಧಿಕಾರಿಗಳಿಗೆ ಮೇಲ್ಮವಿಯನ್ನು ಸಲ್ಲಿಸಿರುವುದಿಲ್ಲ.

3) ಸದರಿ ಜಮೀನು ಮೂಲತಃ ನಮ್ಮ ಮನೆತನಕ್ಕೆ ಮಂಜೂರ ಆಗಿರುತ್ತದೆ ಎಂದು ತೋರಿಸಲು ದಾಖಲಾತಿಯನ್ನು ಹಾಜರು ಮಾಡಿರುತ್ತೇನೆ. ಯಾವ ದಾಖಲಾತಿ ಹಾಜರು ಮಾಡಿರುತ್ತೀರಾ ಎಂದರೆ ಉತಾರೆಗಳನ್ನು ಹಾಜರು ಮಾಡಿರುತ್ತೇನೆ. ಸರ್ಕಾರದವರು ಸದರಿ ಜಮೀನನ್ನು ನಾವು SC-ST ಪಂಗಡಕ್ಕೆ ಸೇರಿದವರು ಆಗಿದ್ದರಿಂದ ನಮಗೆ ಮಂಜೂರು ಮಾಡಿರುತ್ತಾರೆ. ಸದರಿ ಆಸ್ತಿ ನನ್ನ ತಂದೆಯಾದಂತ ಹನುಮಪ್ಪ ವಡ್ಡರ ಇವರ ಹೆಸರಿಗೆ ಮಂಜೂರ ಆಗಿರುತ್ತದೆ. ದಾವಾ ಆಸ್ತಿಯನ್ನು ಸರ್ಕಾರದವರು ನನ್ನ ತಂದೆಯವರಿಗೆ ಮಂಜೂರು ಮಾಡಿರುವುದಿಲ್ಲ ಹಾಗೂ ಸದರಿ ಕುರಿತು ಯಾವುದೇ ದಾಖಲಾತಿ ಹಾಜರು

ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ತೀರಿಕೊಂಡ ನಂತರ ವಾರಸಾ ಪ್ರಕಾರ ವಾದಿಯವರು ಹೆಸರು ಹಚ್ಚಲು ಕಂದಾಯ ಇಲಾಖೆಯವರಿಗೆ ಅರ್ಜಿಯನ್ನು ಕೊಟ್ಟಿರುತ್ತೇವೆ. ಸದರಿ ವಾರಸಾ ಪ್ರಕಾರ ದಾವಾ ಆಸ್ತಿಯ ಉತಾರದಲ್ಲಿ ವಾದಿಯವರ ಹೆಸರು ದಾಖಲಾದ ಕುರಿತು ಯಾವುದಾದರೂ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಆ ರೀಡಿ ದಾಖಲ ಆಗಿಲ್ಲ ಎಂದು ಹೇಳುತ್ತಾರೆ. ಸದರಿ ದಾವಾ ಆಸ್ತಿ ನಮಗೆ ಸಂಬಂದಿಸಿದತೆ ಇರದೇ ಇರುವುದರಿಂದ ಉತಾರದಲ್ಲಿ ದಾಖಲ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಂದರೆ ಆರ್ ಟಿ ಸಿ ಪ್ರಕರಣ ಇರುವುದಿಲ್ಲ ದಾಖಲ ಮಾಡಿರುವುದಿಲ್ಲ ಎಂದು ಹೇಳುತ್ತಾರೆ. ವಾದಿಯರು ವಾರಸಾದಾರರು ಅಲ್ಲದೇ ಇರುವುದರಿಂದ ಸದರಿ ಪ್ರಕರಣ ದಾಖಲ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿಯರು ಹಾಗೂ ನನ್ನ ತಂದೆಯವರು ದಾವಾ ಆಸ್ತಿಗೆ ಸಂಬಂದಿಸದೇ ಇರುವುದರಿಂದ ವಾದಿಯ ಹೆಸರು ಕಂದಾಯ ಇಲಾಖೆ ದಾಲಾತಿಗಳಲ್ಲಿ ನಮ್ಮ ಹೆಸರು ದಾಖಲ ಆಗಿರುವುದಿಲ್ಲ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಕ್ಕೆ ಸರ್ಕಾರದವರು ಮಂಜೂರು ಮಾಡಿರುವ ಪಟ್ಟಿಯಲ್ಲಿ ನನ್ನ ತಂದೆಯವರ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ.

4) ಯಾವುದಾದರೂ ಜಮೀನು ಸರ್ಕಾರದಿಂದ ಮಂಜೂರು ಆದರೆ ಹಕ್ಕು ಪತ್ರ ಕೊಡುತ್ತಾರೆ ಎಂದರೆ ಸರಿ. ಸದರಿ ಪ್ರಕಾರ ದಾವಾ ಆಸ್ತಿ ನನ್ನ ತಂದೆಯವರಿಗೆ ಮಂಜೂರದ ಕುರಿತು ಹಕ್ಕು ಪತ್ರವನ್ನು ಹಾಜರು ಮಾಡಿರುತ್ತೇನೆ. ಈ ಹಂತದಲಿಲ ಸಾಕ್ಷಿಗೆ ನಿಪಿ-1 ಹಾಗೂ ತೋರಿಸಲಾಗಿ ಅದರಲ್ಲಿ ನಮುದಿಸಿದ ವ್ಯಕ್ತಿ ಎಂದರೆ ಪೂಜಾರ ಹನಮಪ್ಪ ಹನಮಪ್ಪ ಇವರು ನನ್ನ ತಂದೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸುವ ಸಲುವಾಗಿ ನಮ್ಮ ಅಡ್ಡಹೆಸರು ಪೂಜಾರ @ ವಡ್ಡರ ಎಂದು ಹೇಳಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ದಾಖಲಿಸಿದ ಪುಜಾರ ಹನಮಪ್ಪ ಇವರು ಬೇರೆ ವ್ಯಕ್ತಿ ಇರುತ್ತಾರೆ ಮತ್ತು ಹನಮಪ್ಪ ಹನಮಪ್ಪ ವಡ್ಡರ ಇವರು ಬೇರೆ ವ್ಯಕ್ತಿ ಇರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೆ ಸರಿ ಇದೆ

**ಪ್ರಧಾನ ದಿವಾಣಿ ನ್ಯಾಯಾಧೀಶರು**

**ಹಾಗೂ ಜೆ.ಎಮ್.ಎಫ್.ಸಿ   ಗದಗ**